# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಜಿ)/ಪಿಆರ್/18/22-23

E-Office: 18715

ಮುಖ್ಯ ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು. ದಿನಾಂಕ:27/4/2022

**ಕಛೇರಿ ಆದೇಶ**

ವಿಷಯ: ಶ್ರೀ ಎಂ.ಅರವಿಂದ್, ಪ್ರ.ದ.ಸ ಇವರಿಗೆ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಮುಖ್ಯ ಲೆಕ್ಕಾಧಿಕಾರಿಗಳ ರವರ ವರದಿ ದಿನಾಂಕ:22-03-2022

2) ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ 60 ಎಸ್.ಆರ್.ಪಿ.84 ದಿನಾಂಕ:23-08-1984.

* * * * * *

ಶ್ರೀ ಎಂ.ಅರವಿಂದ್, ಪ್ರಥಮ ದರ್ಜೆ ಸಹಾಯಕರು, ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ವೇತನ ಪಡೆದು ಓಓಡಿ ಆಧಾರದ ಮೇಲೆ ಉಪ ನಿಯಂತ್ರಕರು (ಹಣಕಾಸು-ಪಶ್ಚಿಮ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ಪಾಲಿಕೆಯ ಸೇವೆಗೆ ಗ್ರೂಪ್ "ಸಿ" ಹುದ್ದೆಯಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ದಿನಾಂಕ:27-05-2011 ರಂದು ಅನುಕಂಪದ ಆಧಾರದ ಮೇಲ ನೇಮಕಗೊಂಡಿರುತ್ತಾರೆ. ಸದರಿ ನೌಕರರು ಯಾವುದೇ ಮುಂಬಡ್ತಿ ಪಡೆಯದೇ ಒಂದೇ ಹುದ್ದೆಯಲ್ಲಿ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವುದರಿಂದ, ಉಲ್ಲೇಖ-(2)ರ ಸರ್ಕಾರಿ ಆದೇಶದನ್ವಯ ಹಾಗೂ ಉಲ್ಲೇಖ-(1)ರ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿಯನ್ವಯ, ದಿನಾಂಕ: 27-05-2021ರಿಂದ ಅನ್ವಯವಾಗುವಂತೆ ವೇತನ ಶ್ರೇಣಿ ರೂ.27650-52650 ರಿಂದ ರೂ. 30350-58250 ವೇತನ ಶ್ರೇಣಿಗೆ ಹೆಚ್ಚಿಸಿ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಿದೆ ಹಾಗೂ ಕೆ.ಸಿ.ಎಸ್.ಆರ್ ನಿಯಮ 42(ಬಿ)(1)ರನ್ವಯ ವೇತನ ನಿಗಧಿಪಡಿಸಲು ಆದೇಶಿಸಿದೆ.

**ಸದರಿ ಆದೇಶವು ಈ ಕೆಳಕಂಡ ಷರತ್ತುಗಳಿಗೊಳಪಟ್ಟಿರುತ್ತದೆ.**

1. ಮುಂದೆ ಈ ಸೌಲಭ್ಯದ ಬಗ್ಗೆ ಲೆಕ್ಕ ಪರಿಶೋಧನೆಯಲ್ಲಿ ಯಾವುದೇ ಆಕ್ಷೇಪಣೆ / ಕಟಾವಣೆಗೆ ಸೂಚಿಸಿದಲ್ಲಿ, ಸದರಿ ನೌಕರರ ವೇತನದಿಂದ ಆಕ್ಷೇಪಣೆ / ಕಟಾವಣೆ ಮೊತ್ತವನ್ನು ಕಡಿತಗೊಳಿಸುವ ಷರತ್ತಿಗೊಳಪಡಿಸಿದೆ.

(ಸಹಿ) 27/4/22
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

26/4/2022 26.4.22

**ಪ್ರತಿಯನ್ನು:**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಅಪರ ಆಯುಕ್ತರು (ಹಣಕಾಸು) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಉಪ ನಿಯಂತ್ರಕರು (ಹಣಕಾಸು -ಪಶ್ಚಿಮ) ಕಛೇರಿಗೆ ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.
: ಮು.ಲೆ.ಅ/ಮು.ಲೆ.ಪ/ಸ.ನಿ (ಹಣಕಾಸು) ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಮಾಹಿತಿಗೆ ಕಳುಹಿಸಿದೆ.
: ಸದರಿ ನೌಕರರಿಗೆ / ಕಛೇರಿ ಪ್ರತಿ.

CO 05/05

5/5/22